## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಇವರು ನಿಯಮ-72 ಅಡಿಯಲ್ಲಿ ನೀಡಿರುವ ಸೂಚನೆ ಮೇಲಿನ ಹೇಳಿಕೆ

ವಿಷಯ:- "ರಾಜ್ಯ ಸರ್ಕಾರವು ಸುಮಾರು 800 ಗ್ರಾಮೀಣ ಪದವೀಧರರನ್ನು 2011-12ನೇ ಸಾಲಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಮೀಸಲಾತಿ ಮಾನದಂಡಗಳನ್ವಯ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ (NRDWP) ಯಡಿ BRC/CRC ಸಂಯೋಜಕರುಗಳಾಗಿ ಇವರ ಸೇವೆಯನ್ನು ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿತ್ತು. ನೂತನ ಜಲ ಜೀವನ್ ಮಿಷನ್ ಯೋಜನೆ ಜಾರಿಗೆ ಬಂದ ನಂತರ ಇವರ ಸೇವೆಯನ್ನು ಮುಂದುವರೆಸದೆ ವಿಮುಕ್ತಿಗೊಳಿಸಲಾಗಿರುತ್ತದೆ. ಇದರ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯವು ಇದು Policy Decision ಗೆ ಸಂಬಂಧಿಸಿದ್ದರಿಂದ ಸರ್ಕಾರವು ಅದರಂತೆ ಕ್ರಮ ವಹಿಸಲು ನಿರ್ದೇಶನ ನೀಡಿರುತ್ತದೆ.

ಕೇಂದ್ರ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಕೂಡ ಸದರಿ ಸಿಬ್ಬಂದಿಗಳ ವಿಚಾರವಾಗಿ ರಾಜ್ಯಗಳಿಗೆ ಕೇವಲ ಆರ್ಥಿಕ ಮತ್ತು ತಾಂತ್ರಿಕ ನೆರವನ್ನಷ್ಟೇ ನಾವು ಒದಗಿಸುತ್ತಿರುವುದಾಗಿ, ಸಿಬ್ಬಂದಿಗಳ ಸೇವೆಯ ನೇಮಕ/ಮುಂದುವರಿಕೆಯ ಬಗ್ಗೆ ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಟ್ಟಿರುತ್ತೇವೆ ಎಂದು ತಿಳಿಸಿರುತ್ತಾರೆ. ಪಂಜಾಬ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸದರಿ ಸಿಬ್ಬಂದಿಗಳನ್ನು ಜಲ ಜೀವನ್ ಮಿಷನ್ ಯೋಜನೆಯಡಿ ಮುಂದುವರೆಸಿರುವುದಾಗಿ ತಿಳಿದುಬಂದಿರುತ್ತದೆ.

ಆದ್ದರಿಂದ ಸರ್ಕಾರವು ಈ ವಿಷಯವನ್ನು ಸಚಿವ ಸಂಪುಟದ ಮುಂದೆ ತಂದು ಅನುಮೋದನೆಯನ್ನು ಪಡೆದು Policy Decision ಮಾಡುವುದರೊಂದಿಗೆ ನೂರಾರು ಗ್ರಾಮೀಣ ಪದವೀಧರ ಕುಟುಂಬಗಳಿಗೆ ಜೀವನ ಭದ್ರತೆ ನೀಡುವ ಕಲ್ಯಾಣ ಕರ್ನಾಟಕದ ಕನಸನ್ನು ನನಸು ಮಾಡುವ ಸಂಬಂಧ ಕುರಿತು.

******

ಹೇಳಿಕೆ: NRDWP ಯೋಜನೆಯಡಿ 2011-12ನೇ ಸಾಲಿನಲ್ಲಿ ತಾತ್ಕಾಲಿಕವಾಗಿ 1 ವರ್ಷದ ಅವಧಿಗೆ 149 BRC ಮತ್ತು 563 CRC ಗಳನ್ನು ರಾಜ್ಯದ 25 ಜಿಲ್ಲೆಗಳಲ್ಲಿ ವೈಯಕ್ತಿಕ ಸಮಾಲೋಚನಾ ಶುಲ್ಕದ ಆಧಾರದ ಮೇರೆಗೆ ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. 1 ವರ್ಷದ ಅವಧಿ ಪೂರ್ಣಗೊಂಡ ನಂತರ ಅಂದರೆ, ದಿನಾಂಕ:30-04-2012ರ ಅಂತ್ಯಕ್ಕೆ ಸದರಿ BRC ಮತ್ತು CRCಗಳ ಸೇವೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಈ ಕಾರಣದಿಂದಾಗಿ BRC ಮತ್ತು CRCಗಳು ತಮ್ಮ ಸೇವೆಯನ್ನು ಮುಂದುವರೆಸಲು ಕೋರಿ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಮತ್ತು ಧಾರವಾಡ ಪೀಠಗಳಲ್ಲಿ WP ಸಂಖ್ಯೆ:11604-11607/2013, 143621-667/2020, 5628/2020, 146282-289/2020, 146885-891/2020, 146827-830/2020, 8863/2020, 147862/2020, 147744/2020 ಮತ್ತು CC:257/2020 ಗಳಲ್ಲಿ ದಾವೆಯನ್ನು ಹೂಡಿರುತ್ತಾರೆ.

ಮತ್ತೊಂದು ಪ್ರಕರಣದಲ್ಲಿ ಉಡುಪಿ ಜಿಲ್ಲೆಯ 4 BRC/CRC ಗಳು WP ಸಂಖ್ಯೆ:38748-38751/2014ರಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:12.07.2019ರ ತೀರ್ಪಿನಲ್ಲಿ ಕೆಳಕಂಡಂತೆ ಆದೇಶಿಸಲಾಗಿದೆ

- *The petitioners have no right to hold the post as it was a tenure post. the petitioners have not sought for quashing later policy relating out-sourcing in implementation of NRDWP scheme. Thus, the petitioners are not entitled to re-appoint to the post of Block Resource Co-ordinators (BRCs) and Cluster Resource Co-ordinators (CRCs).*

ಮುಂದುವರೆದು, NRDWP ಕಾರ್ಯಕ್ರಮದಡಿ BRC ಮತ್ತು CRC ಗಳ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿತ್ತು, ದಿನಾಂಕ:15-08-2019ರಂದು ಘೋಷಿಸಲಾದ "ರಾಷ್ಟ್ರೀಯ ಜಲ್ ಜೀವನ್ ಮಿಷನ್" ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳಲ್ಲಿ BRC ಮತ್ತು CRC ಹುದ್ದೆಗಳನ್ನು ಮುಂದುವರೆಸುವ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ರಾಷ್ಟ್ರೀಯ ಜಲ್ ಜೀವನ್ ಮಿಷನ್ ಯೋಜನೆಯ ಆರಂಭದಿಂದಾಗಿ, NRDWP ಯೋಜನೆಯು ದಿನಾಂಕ:31-03-2020ಕ್ಕೆ ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ ದಿನಾಂಕ:29.02.2020ರ ಅರೆ ಸರ್ಕಾರಿ ಪತ್ರದಲ್ಲಿ BRC ಮತ್ತು CRC ಗಳ ಸೇವೆಯನ್ನು ಮುಕ್ತಾಯಗೊಳಿಸುವಂತೆ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು.

ಅದರಂತೆ ಸೇವೆಯಿಂದ ಬಿಡುಗಡೆಗೊಳಿಸಿದ್ದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ WP ಸಂಖ್ಯೆ:143621-667/2020-47, 146282-289/2020-8, 146885-891/2020-7, 146827-830/2020-4, 147862/2020-5, 147744/2020-7 ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ WP ಸಂಖ್ಯೆ:5628/2020-38 & 8863/2020-19 ಅರ್ಜಿಗಳಲ್ಲಿ BRC/CRC ಗಳು ದಾವೆ ಹೂಡಿರುತ್ತಾರೆ. ಸದರಿ ದಾವೆಗಳಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಮತ್ತು ಬೆಂಗಳೂರಿನ ಮಧ್ಯಂತರ ಆದೇಶಗಳನ್ವಯ ಅಂತಿಮ ತೀರ್ಪಿನವರೆಗೆ BRC/CRCಗಳನ್ನು ಮುಂದುವರೆಸಲು ನಿರ್ದೇಶಿಸಿರುತ್ತಾರೆ. ಸದರಿ ಆದೇಶದನ್ವಯ, ಸೇವೆಯಲ್ಲಿ ಮುಂದುವರೆದವರನ್ನು ಮಾತ್ರ ಮಾರ್ಚ್-31, 2020ರವರೆಗೆ ಕಾರ್ಯನಿರ್ವಹಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಗಳಿಗೆ ಸೂಚಿಸಲಾಗಿತ್ತು.

ಮುಂದುವರೆದು ಪ್ರಸ್ತುತ, ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ದಾಖಲಾದ WP ಸಂಖ್ಯೆ:5628/2020 ಮತ್ತು 8863/2020ರ ಮಧ್ಯಂತರ ಆದೇಶವನ್ನು ದಿನಾಂಕ:22.06.2021ರಂದು ವಿಲೇಗೊಂಡಿರುತ್ತದೆ(Disposed). WP ಸಂಖ್ಯೆ:5628/2020 ಹಾಗೂ WP ಸಂಖ್ಯೆ:8863/2020 ಪ್ರಕರಣಗಳ ವಿಲೇವಾರಿಗೊಂಡ ಆದೇಶ ನ್ಯಾಯಾಲಯದಿಂದ ಲಭಿಸಿದ ತಕ್ಷಣ ಮುಂದಿನ ಕ್ರಮ ವಹಿಸಲಾಗಿರುತ್ತದೆ.

WP ಸಂಖ್ಯೆ:11604-607/2013 ಪ್ರಕರಣದ ತೀರ್ಪಿಗೆ ವಿರುದ್ಧವಾಗಿ ಸಲ್ಲಿಸಲಾದ ಮೇಲ್ಮನವಿ ಆದೇಶವನ್ನು (Writ Appeal) 359/2020 ಮಾನ್ಯ ನ್ಯಾಯಾಲಯವು ಎತ್ತಿಹಿಡಿದಿದ್ದು, ಈ ತೀರ್ಪಿನ ವಿವರ ಈ ಕೆಳಗಿನಂತಿರುತ್ತದೆ.

*i. Subject to modification made of paragraph 6 of the impugned order as discussed above, no case for interference in impugned order is made out.*

*ii. The appeal is accordingly dismissed*

*iii. The pending interlocutory application does not survive for consideration and stands disposed of.*

In the light of the aforesaid judgment delivered by the Division Bench, The question of continuance of the respondents before this court in the present appeal does not arise. They have engaged under a scheme which as come to an end they are no longer in service. It is true that they have worked under earlier scheme for almost a year that too in the year 2011-12 as they were appointed on 21.04.2011 but that itself does not entitle them for appointment under some other scheme on contractual basis as the work under the scheme i.e JJM as already been entrusted to a Non-Governmental Organization. Resultantly, this Court is of the opinion that the order passed by the learned Single Judge deserves to be set aside and it is accordingly set aside.

ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಲ್ಲಿಸಿದ WP ಸಂಖ್ಯೆ:10527/2020, 5628/2020, 8863/2020 ಹಾಗೂ 9347/2020 ರಿಟ್ ಅರ್ಜಿಗಳನ್ನು ದಿನಾಂಕ:22.06.2021ರಂದು ವಿಲೇಗೊಳಿಸಿ ಆದೇಶಿಸಲಾಗಿದೆ. ಉಚ್ಚ ನ್ಯಾಯಾಲಯದ ತೀರ್ಮಾನದ ವಿರುದ್ಧ ಶ್ರೀ ಲಿಂಗರಾಜು ಬಿ ಹಾಗೂ ಇತರ 20 ಜನ BRC ಮತ್ತು CRC ರವರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ:763/2021ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:05.08.2021ರಂದು ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

ಅದೇ ರೀತಿಯಾಗಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ಸಲ್ಲಿಸಿದ ಎಲ್ಲಾ ರಿಟ್ ಅರ್ಜಿಗಳನ್ನು ದಿನಾಂಕ:31.08.2021ರಂದು ವಿಲೇಗೊಳಿಸಿ ಆದೇಶಿಸಲಾಗಿದೆ. ಮಾನ್ಯ ನ್ಯಾಯಾಲಯದ ತೀರ್ಮಾನದಂತೆ ಅಗತ್ಯ ಕ್ರಮ ಜರುಗಿಸಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

**ಕಡತ ಸಂಖ್ಯೆ:ಗ್ರಾಕುನೀ&ನೈಇ /593/ಗ್ರಾನೀಸ(4)2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ